ವಿಜಯ ಕರ್ನಾಟಕ

ಸೋಮವಾರ,25 ಏಪ್ರಿಲ್ 2022, ಮಂಗಳೂರು

# 12 ವರ್ಷದ ಬಾಲಕ ಕ್ಯಾನ್ಸರ್‌ಮುಕ್ತ

## ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ ವೈದ್ಯರಿಂದ ಯಶಸ್ವಿ ಶಸ್ತ್ರಚಿಕಿತ್ಸೆ

**ವಿಕ ಸುದ್ದಿಲೋಕ** ಉಡುಪಿ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಅಕ್ಯೂಟ್ ಮೈಲೋಯ್ಡ್ ಲ್ಯುಕೇಮಿಯಾ (ಒಂದು ರೀತಿಯ ರಕ್ತದ ಕ್ಯಾನ್ಸರ್)ದಿಂದ ಬಳಲುತ್ತಿದ್ದ 12 ವರ್ಷದ ಬಾಲಕನಿಗೆ ಕರಾವಳಿ ಕರ್ನಾಟಕ ದಲ್ಲಿಯೇ ಪ್ರಥಮ ಎನ್ನಲಾದ ಅರ್ಧ ಹೊಂದಾಣಿಕೆಯ ಅಸ್ಥಿಮಜ್ಜೆಯ ಕಸಿ ಯನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಅಸ್ಥಿಮಜ್ಜೆ ಕಸಿ ಮಾಡಿ 7 ತಿಂಗಳು ಕಳೆದಿದ್ದು, ಈಗ ರೋಗಿಯು ಕ್ಯಾನ್ಸರ್‌ನಿಂದ ಮುಕ್ತನಾಗಿದ್ದಾನೆ ಮತ್ತು ತನ್ನ ದಿನನಿತ್ಯದ ಚಟುವಟಿಕೆಗಳನ್ನು ಮುಂದು ವರಿಸುತ್ತಿದ್ದಾನೆ ಎಂದು ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಕ್ಯಾನ್ಸರ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಅರ್ಚನಾ ಎಂ.ವಿ. ತಿಳಿಸಿದ್ದಾರೆ.

**ಏನಿದು ಪ್ರಕರಣ?:** ಅಕ್ಯೂಟ್ ಮೈಲೋಯ್ಡ್ ಲ್ಯುಕೇಮಿಯಾ ರೋಗ ಪತ್ತೆಯಾದ ಬಾಲಕನಿಗೆ ಬೇರೆಡೆ ಕೀಮೋ ಥೆರಪಿ ನೀಡಲಾಗಿತ್ತು ಮತ್ತು ಅಸ್ಥಿಮಜ್ಜೆಯ ಕಸಿ ಮಾಡಲು ಮಣಿ ಪಾಲದ ಕೆಎಂಸಿ ಆಸ್ಪತ್ರೆಗೆ ಕಳುಹಿಸ ಲಾಗಿತ್ತು. ಅಸ್ಥಿಮಜ್ಜೆಯ ಕಸಿ ಮಾಡುವು ದೊಂದೇ ಬಾಲಕನಿಗೆ ಕ್ಯಾನ್ಸರ್‌ನಿಂದ ಗುಣಮುಖವಾಗಬಲ್ಲ ಚಿಕಿತ್ಸೆಯಾಗಿತ್ತು.

**ಅಸ್ಥಿಮಜ್ಜೆ ಕಸಿ:** ಅಸ್ಥಿಮಜ್ಜೆ ಕಸಿಯು ವೈದ್ಯರು ಮತ್ತು ಶುಶ್ರೂಷಾ ಸಿಬ್ಬಂದಿ ತಜ್ಞರ ತಂಡದಿಂದ ಮಾಡಲಾಗುವ ಸಂಕೀರ್ಣ ವೈದ್ಯಕೀಯ ಚಿಕಿತ್ಸೆಯಾಗಿದೆ. ಇದು ಕ್ಯಾನ್ಸರ್‌ಯುಕ್ತ ಅಸ್ಥಿಮಜ್ಜೆಯನ್ನು ನಿರ್ಮೂಲನೆ ಮಾಡಿ ಆರೋಗ್ಯಕರ ಅಸ್ಥಿಮಜ್ಜೆಯ ಕೋಶಗಳನ್ನು ವರ್ಗಾಯಿಸುವ ಪ್ರಕ್ರಿಯೆಯಾಗಿದೆ. ರೋಗಿಗೆ ಅಸ್ಥಿಮಜ್ಜೆಯನ್ನು ದಾನ ಮಾಡಲು ಪೂರ್ಣ ಎಚ್‌ಎಲ್‌ಎ ಹೊಂದಾಣಿಕೆಯ ದಾನಿಯನ್ನು ಆಯ್ಕೆ ಮಾಡಲಾಗುತ್ತದೆ. ಈ ಬಾಲಕನಲ್ಲಿ ಕಂಡು ಬಂದ ಸವಾಲು ಎಂದರೆ ಪೂರ್ಣ ಎಚ್‌ಎಲ್‌ಎ ಹೊಂದಾಣಿಕೆಯ ದಾನಿ ಲಭ್ಯವಿರಲಿಲ್ಲ ಮತ್ತು ದಾನಿಯನ್ನು ಹುಡುಕಲು ಹೆಚ್ಚು ಸಮಯ ಕೂಡ ಇರಲಿಲ್ಲ.

ಇದು ಕರಾವಳಿ ಪ್ರದೇಶದಲ್ಲಿ ಯಶಸ್ವಿ ಹ್ಯಾಪ್ಲೋಐಡೆಂಟಿಕಲ್ ಬೋನ್ ಮ್ಯಾರೋ ಟ್ರಾನ್ಸ್ ಪ್ಲಾಂಟ್‌ಗೆ ಒಳಗಾದ ಮೊದಲ ಪ್ರಕರಣ ಎಂದು ವಿಭಾಗದ ಮುಖ್ಯಸ್ಥ ಡಾ. ವಾಸುದೇವ ಭಟ್ ಕೆ. ತಿಳಿಸಿದ್ದಾರೆ. ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ವೈದ್ಯರ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

### ಸಹೋದರಿಯೇ ದಾನಿ

ವೈದ್ಯರ ತಂಡವು ಬಾಲಕನನ್ನು ಉಳಿಸುವ ನಿಟ್ಟಿನಲ್ಲಿ ಅರ್ಧ ಎಚ್‌ಎಲ್‌ವಿ ಹೊಂದಾ ಣಿಕೆಯ ಅಸ್ಥಿಮಜ್ಜೆಯ ಕಸಿ ಮಾಡಲು ನಿರ್ಧರಿಸಿತು. ರೋಗಿಯ 9 ವರ್ಷದ ಸಹೋದರಿ ದಾನಿಯಾಗಿ ಹೊಂದಾಣಿಕೆ ಯಾದಳು. ರೋಗಿಯನ್ನು 6 ವಾರ ವಿಶೇಷ ಅಸ್ಥಿಮಜ್ಜೆಯ ಕಸಿ ಮಾಡುವಿಕೆ ಘಟಕದಲ್ಲಿ ಕಸಿ ಮಾಡಲಾಯಿತು. ನಂತರ ಆರೋಗ್ಯ ಸ್ಥಿರವಾದ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

> ಅಸ್ಥಿಮಜ್ಜೆಯ ಕಸಿ ಮಾಡುವುದರಿಂದ ಈ ಹಿಂದೆ ಗುಣಪಡಿಸಲಾಗದ ಕಾಯಿಲೆಗಳಿಗೆ ಚಿಕಿತ್ಸೆ ದೊರಕಿದೆ ಮತ್ತು ಅನೇಕ ರೋಗಿಗಳ ಜೀವನವನ್ನು ಬದಲಾಯಿಸಿದೆ. ಅಸ್ಥಿಮಜ್ಜೆ ಕಸಿ ಕೆಂಪು ರಕ್ತ ಕಣಗಳ ಅಸ್ವಸ್ಥತೆಗಳು(ತಲಸ್ಸೆಮಿಯಾ), ಅಸ್ಥಿಮಜ್ಜೆಯ ವೈಫಲ್ಯ, ಇಮ್ಯುನೊ ಡೆಫೀಶಿಯೆನ್ಸಿ ಮತ್ತು ಕೆಲವು ವಿಧದ ಕ್ಯಾನ್ಸರ್ ರೋಗಗಳಿಗೆ ಶಾಶ್ವತ ಗುಣಪಡಿಸುವ ಚಿಕಿತ್ಸೆಯಾಗಿದೆ.
>
> **-ಡಾ.ಅರ್ಚನಾ ಎಂ.ವಿ.,**
> ವೈದ್ಯಕೀಯ ಅಧೀಕ್ಷಕರು, ಮಕ್ಕಳ ರಕ್ತಶಾಸ್ತ್ರ ಮತ್ತು ಕ್ಯಾನ್ಸರ್ ವಿಭಾಗ, ಕೆಎಂಸಿ ಆಸ್ಪತ್ರೆ, ಮಣಿಪಾಲ

ಪ್ರಜಾವಾಣಿ
ಸೋಮವಾರ • ಏಪ್ರಿಲ್ 25, 2022

### ಅರ್ಧ ಹೊಂದಾಣಿಕೆಯ ಅಸ್ಥಿಮಜ್ಜೆ: ಕರಾವಳಿಯಲ್ಲಿ ಮೊದಲ ಯಶಸ್ವಿ ಪ್ರಯತ್ನ

# ಕೆಎಂಸಿಯಲ್ಲಿ ಅಸ್ಥಿಮಜ್ಜೆ ಕಸಿ ಯಶಸ್ವಿ

ಪ್ರಜಾವಾಣಿ ವಾರ್ತೆ



ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಈಚೆಗೆ ಬಾಲಕನಿಗೆ ಅರ್ಧ ಹೊಂದಾಣಿಕೆಯ ಅಸ್ಥಿಮಜ್ಜೆ ಕಸಿಯನ್ನು ಯಶಸ್ವಿಯಾಗಿ ಮಾಡಲಾಗಿದೆ.

ಉಡುಪಿ: ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಈಚೆಗೆ ಬಾಲಕನಿಗೆ ಅರ್ಧ ಹೊಂದಾಣಿಕೆಯ ಅಸ್ಥಿಮಜ್ಜೆ ಕಸಿಯನ್ನು ಯಶಸ್ವಿಯಾಗಿ ಮಾಡಲಾಗಿದೆ.

12 ವರ್ಷದ ಬಾಲಕ ಈಚೆಗೆ ಅಕ್ಯೂಟ್ ಮೈಲೋಯ್ಡ್ ಲ್ಯುಕೇಮಿಯಾ (ರಕ್ತದ ಕ್ಯಾನ್ಸರ್) ಎಂಬ ರೋಗದಿಂದ ಬಳಲುತ್ತಿದ್ದರ. ಮಾರಕ ಕಾಯಿಲೆ ಗುಣಪಡಿಸಲು ಅಸ್ಥಿಮಜ್ಜೆಯ ಕಸಿ ಬಹಳ ಅಗತ್ಯವಾಗಿದ್ದ ಹಿನ್ನೆಲೆಯಲ್ಲಿ ಈಚೆಗೆ ಬಾಲಕನನ್ನು ಕೆಎಂಸಿ ಆಸ್ಪತ್ರೆಗೆ ದಾಖಲಿಸಿಕೊಳ್ಳಲಾಗಿತ್ತು.

ಅಸ್ಥಿ ಮಜ್ಜೆಯ ಕಸಿಯ ತಜ್ಞ ವೈದ್ಯರ ಹಾಗೂ ಶುಶ್ರೂಷಕರ ತಂಡ ಬಹಳ ಸಂಕೀರ್ಣವಾದ ಅಸ್ಥಿಮಜ್ಜೆಯ ಕಸಿಯನ್ನು ಯಶಸ್ವಿಯಾಗಿ ಮಾಡಿದ್ದು, ಬಾಲಕ ರೋಗದಿಂದ ಗುಣಮುಖನಾಗಿ ಚೇತರಿಸಿಕೊಂಡಿದ್ದಾನೆ ಎಂದು ಕೆಎಂಸಿ ವೈದ್ಯರು ತಿಳಿಸಿದ್ದಾರೆ.

**ಹೇಗೆ ನಡೆಯಿತು ಚಿಕಿತ್ಸೆ:** ಬಾಲಕನಿಗೆ ರೋಗ ಕಾಣಿಸಿಕೊಂಡ ಬಳಿಕ ಕ್ಯಾನ್ಸರ್ ಯುಕ್ತ ಅಸ್ಥಿ ಮಜ್ಜೆಯನ್ನು ನಿರ್ಮೂಲನೆ ಮಾಡಿ ಆರೋಗ್ಯಕರ ಅಸ್ಥಿ ಮಜ್ಜೆಯ ಕೋಶಗಳನ್ನು ವರ್ಗಾಯಿಸಬೇಕಿತ್ತು. ಈ ಪ್ರಕ್ರಿಯೆಗೆ ಅಸ್ಥಿ ಮಜ್ಜೆ ದಾನ ಮಾಡಲು ಪೂರ್ಣ ಎಚ್‌ಎಲ್‌ಎ ಹೊಂದಾಣಿಕೆಯಾಗುವ ದಾನಿಯನ್ನು ಆಯ್ಕೆ ಮಾಡಬೇಕಾಗಿತ್ತು.

ಆದರೆ, ಬಾಲಕನಿಗೆ ಪೂರ್ಣ ಎಚ್‌ಎಲ್‌ಎ ಹೊಂದಾಣಿಕೆಯಾಗುವ ದಾನಿ ಸಿಗಲಿಲ್ಲ. ದಾನಿಯನ್ನು ಹುಡುಕಲು ಹೆಚ್ಚು ಸಮಯವೂ ಇರಲಿಲ್ಲ. ಪರ್ಯಾಯವಾಗಿ ಕಸ್ತೂರಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕಾಲಜಿ ವಿಭಾಗದ ವೈದ್ಯರ ತಂಡವು, ವಿಶಿಷ್ಟವಾದ ಅರ್ಧ ಎಚ್‌ಎಲ್‌ಎ ಹೊಂದಾಣಿಕೆಯ ಅಸ್ಥಿಮಜ್ಜೆಯ ಕಸಿ ಮಾಡಲು ನಿರ್ಧರಿಸಿತು.

ರೋಗಿಯ ಸಹೋದರಿಯ (9 ವರ್ಷದ ಬಾಲಕಿ) ಶೇ 50 ಎಚ್‌ಎಲ್‌ಎ ಹೊಂದಿಕೆಯಾಗಿದ್ದರಿಂದ ಅವಶ್ಯ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿ, ಬಾಲಕಿಯಿಂದ ಅಸ್ಥಿಮಜ್ಜೆ ಪಡೆದು, 6 ವಾರಗಳ ಕಾಲ ವಿಶೇಷ ಅಸ್ಥಿ ಮಜ್ಜೆಯ ಕಸಿ ಮಾಡುವಿಕೆಯ ಘಟಕದಲ್ಲಿ ಕಸಿ ಮಾಡಲಾಯಿತು.

ನಂತರ ಆರೋಗ್ಯ ಸ್ಥಿರ ಸ್ಥಿತಿಗೆ ಬಂದಾಗ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಬಾಲಕನಿಗೆ ಅರ್ಧ-ಹೊಂದಾಣಿಕೆಯ ಅಸ್ಥಿ ಮಜ್ಜೆಯ ಕಸಿ ಮಾಡಿ 7 ತಿಂಗಳು ಕಳೆದಿದ್ದು, ಯಶಸ್ವಿಯಾಗಿದೆ. ಬಾಲಕ ಕ್ಯಾನ್ಸರ್‌ನಿಂದ ಮುಕ್ತರಾಗಿದ್ದು, ದಿನನಿತ್ಯದ ಚಟುವಟಿಕೆಗಳನ್ನು ಮಾಡುತ್ತಿದ್ದಾನೆ ಎಂದು ವೈದ್ಯರು ತಿಳಿಸಿದ್ದಾರೆ.

ಅಸ್ಥಿಮಜ್ಜೆ ಕಸಿ ತಜ್ಞ ಡಾ.ಎಂ.ವಿ. ವಿನಯ್ ಮಾತನಾಡಿ, '2 ದಶಕಗಳಲ್ಲಿ ಅಸ್ಥಿ ಮಜ್ಜೆಯ ಕಸಿ ವಿಧಾನದಲ್ಲಿ ಬಹಳ ಪ್ರಗತಿಯಾಗಿದ್ದು, ನವೀನ ತಂತ್ರಜ್ಞಾನಗಳು ಮತ್ತು ಸುಧಾರಿತ ಇಮ್ಯುನೊಸಪ್ರೆಸಿವ್ ಔಷಧಿಗಳು ಲಭ್ಯವಿದ್ದು, ಅರ್ಧ-ಹೊಂದಾಣಿಕೆಯ ಕಸಿ ಮಾಡುವಿಕೆ ಸಾಧ್ಯವಾಗಿದೆ ಎಂದರು.

ಡಾ.ಕೆ.ವಾಸುದೇವ ಭಟ್ ಮಾತನಾಡಿ, 'ಕರಾವಳಿ ಪ್ರದೇಶದಲ್ಲಿ ಯಶಸ್ವಿ ಹ್ಯಾಪ್ಲೋಐಡೆಂಟಿಕಲ್ ಬೋನ್ ಮ್ಯಾರೋ ಟ್ರಾನ್ಸ್ ಪ್ಲಾಂಟ್ ಮಾಡಲಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಮಾತನಾಡಿ, ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕಾಲಜಿ ವಿಭಾಗದ ವೈದ್ಯರು, ರಕ್ತ ಕೇಂದ್ರ ಮತ್ತು ಶುಶ್ರೂಷಕರ ತಂಡದ ಶ್ರಮದಿಂದ ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಬಾಲಕನ ಜೀವ ಉಳಿಸಲು ಸಾಧ್ಯವಾಯಿತು ಎಂದು ಶ್ಲಾಘಿಸಿದರು.

## ರೋಗಿಗಳ ಜೀವನ ಬದಲಿಸಿದ ಚಿಕಿತ್ಸೆ

'ಅಸ್ಥಿ ಮಜ್ಜೆಯ ಕಸಿಯಿಂದ ಹಿಂದೆ ಗುಣಪಡಿಸಲಾಗದ ಕಾಯಿಲೆಗಳನ್ನು ಈಗ ಗುಣಪಡಿಸಬಹುದಾಗಿದೆ. ಈ ಪ್ರಕ್ರಿಯೆ ರೋಗಿಗಳ ಜೀವನವನ್ನೇ ಬದಲಿಸಿದೆ. ಕೆಂಪು ರಕ್ತ ಕಣಗಳ ಅಸ್ವಸ್ಥತೆಗಳು (ಥಲಸ್ಸೆಮಿಯಾ), ಅಸ್ಥಿ ಮಜ್ಜೆಯ ವೈಫಲ್ಯ, ಇಮ್ಯುನೊ ಡಿಫಿಷಿಯನ್ಸಿ ಮತ್ತು ಕೆಲವು ವಿಧದ ಕ್ಯಾನ್ಸರ್ ರೋಗಗಳನ್ನು ಅಸ್ಥಿಮಜ್ಜೆಯ ಕಸಿಯಿಂದ ಶಾಶ್ವತವಾಗಿ ಗುಣಪಡಿಸಬಹುದಾಗಿದೆ ಎಂದು ಮಕ್ಕಳ ರಕ್ತಶಾಸ್ತ್ರ ಮತ್ತು ಕ್ಯಾನ್ಸರ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎಂ.ವಿ.ಅರ್ಚನಾ ಹೇಳಿದರು.

SUNDAY TIMES OF INDIA, MANGALURU
APRIL 24, 2022

# Half-matched bone marrow transplant performed on boy

Times News Network

Udupi: A team of doctors in the division of paediatric hematology and oncology at Kasturba Hospital, Manipal, decided to perform a half-matched bone marrow transplant, a unique procedure, to save a 12-year-old boy.

The patient was diagnosed with acute myeloid leukemia (a type of blood cancer) received chemotherapy elsewhere, and was referred for bone marrow transplantation to Kasturba Hospital, Manipal.

The only treatment that could cure him of his cancer was a bone marrow transplant.

The patient's sister, a nine-year-old, was only a 50% HLA match, and was selected once declared fit after medical tests.

The patient underwent bone marrow transplantation in the specialised BMT unit for a period of six weeks, and was discharged in a stable condition. He is now seven months free from cancer, and continuing to do his routine activities, after a successful half-matched bone marrow transplant.

THE NEW INDIAN EXPRESS

MONDAY 25.04.2022

# Half-matched bone marrow transplant undertaken at KH

UDUPI: Specialist doctors at Kasturba Hospital, Manipal, undertook the challenge of performing a half-matched bone marrow transplantation on a 12-year old boy. The boy diagnosed with Acute Myeloid Leukemia (a type of blood cancer) received chemotherapy elsewhere and was referred for bone marrow transplantation to Kasturba Hospital, Manipal. Usually a full HLA matched donor is often selected for the donation of stem cells to the patient. Dr Archana M.V, Assistant Professor in the division said this was a challenging case as there was no full HLA matched donors available and there was not much time left to find a donor. ENS

ವಿಜಯವಾಣಿ
VIJAYAVANI » MANGALURU
ಭಾನುವಾರ 24 ಏಪ್ರಿಲ್ 2022
24 APRIL 2022

# ಕಸ್ತೂರ್ಬಾದಲ್ಲಿ ಅರ್ಧ ಹೊಂದಾಣಿಕೆ ಅಸ್ಥಿಮಜ್ಜೆ ಕಸಿ

## ರೋಗಿ ಕ್ಯಾನ್ಸರ್‌ನಿಂದ ಮುಕ್ತ | ಆಸ್ಪತ್ರೆ ವೈದ್ಯರ ತಂಡದಿಂದ ವಿಶಿಷ್ಟ ಸಾಧನೆ



ಕಸ್ತೂರ್ಬಾ ಆಸ್ಪತ್ರೆಯಲ್ಲಿ ಅರ್ಧ ಹೊಂದಾಣಿಕೆ ಅಸ್ಥಿಮಜ್ಜೆ ಕಸಿ ನಡೆಸಿದ ವೈದ್ಯಕೀಯ ತಂಡ ಹಾಗೂ ಚಿಕಿತ್ಸೆ ಪಡೆದ ಬಾಲಕ.

ಉಡುಪಿ: ಅಕ್ಯೂಟ್ ಮೈಲೋಯ್ಡ್ ಲ್ಯುಕೇಮಿಯಾ (ಒಂದು ರೀತಿಯ ರಕ್ತದ ಕ್ಯಾನ್ಸರ್) ರೋಗ ಪತ್ತೆಯಾದ 12 ವರ್ಷದ ಬಾಲಕನಿಗೆ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಅರ್ಧ ಹೊಂದಾಣಿಕೆ ಅಸ್ಥಿಮಜ್ಜೆ ಕಸಿ ಮಾಡಲಾಗಿದೆ.

ಮಗುವಿಗೆ ಪೂರ್ಣ ಎಚ್‌ಎಲ್‌ಎ ಹೊಂದಾಣಿಕೆಯ ದಾನಿಯು ಲಭ್ಯವಿರಲಿಲ್ಲ. ದಾನಿಯನ್ನು ಹುಡುಕಲು ಹೆಚ್ಚು ಸಮಯ ಕೂಡ ಇರಲಿಲ್ಲ. ಇದಕ್ಕೆ ಪರ್ಯಾಯವಾಗಿ ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೋಲಜಿ ವಿಭಾಗದ ವೈದ್ಯರ ತಂಡ ಮಗುವನ್ನು ಉಳಿಸುವ ವಿಶಿಷ್ಟವಾದ ಅರ್ಧ ಎಚ್‌ಎಲ್‌ಎ ಹೊಂದಾಣಿಕೆಯ ಅಸ್ಥಿಮಜ್ಜೆಯ ಕಸಿ ಮಾಡಲು ನಿರ್ಧರಿಸಿತು. ರೋಗಿಯ ಸಹೋದರಿ (9 ವರ್ಷ)ಯನ್ನು ಅವಶ್ಯ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿದ ನಂತರ ದಾನಿ ಎಂದು ನಿರ್ಧರಿಸಲಾಯಿತು. ರೋಗಿಯನ್ನು 6 ವಾರ ವಿಶೇಷ ಅಸ್ಥಿಮಜ್ಜೆಯ ಕಸಿ ಮಾಡುವಿಕೆ ಘಟಕದಲ್ಲಿ ಚಿಕಿತ್ಸೆ ನೀಡಲಾಯಿತು. ನಂತರ ಆರೋಗ್ಯ ಸ್ಥಿರ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಅರ್ಧ-ಹೊಂದಾಣಿಕೆಯ ಅಸ್ಥಿಮಜ್ಜೆಯ ಕಸಿ ಯಶಸ್ವಿಯಾಗಿದ್ದು, ಕಸಿ ಮಾಡಿ 7 ತಿಂಗಳ ಬಳಿಕ ರೋಗಿ ಕ್ಯಾನ್ಸರ್‌ನಿಂದ ಮುಕ್ತರಾಗಿದ್ದಾರೆ. ದಿನನಿತ್ಯದ ಚಟುವಟಿಕೆಗಳನ್ನು ಮುಂದುವರಿಸುತ್ತಿದ್ದಾರೆ.

ಈ ಬಗ್ಗೆ ಮಾತನಾಡಿದ ಮಕ್ಕಳ ಅಸ್ಥಿಮಜ್ಜೆ ಕಸಿ ತಜ್ಞ ಡಾ. ವಿನಯ್ ಎಂ.ವಿ., ಕಳೆದ 2 ದಶಕಗಳಲ್ಲಿ ಅಸ್ಥಿಮಜ್ಜೆಯ ಕಸಿ ವಿಧಾನ ಬಹಳ ದೂರ ಸಾಗಿದೆ. ನವೀನ ತಂತ್ರಜ್ಞಾನಗಳು ಮತ್ತು ಸುಧಾರಿತ ಇಮ್ಯುನೊಸಪ್ರೆಸಿವ್ ಔಷಧಗಳು ಲಭ್ಯವಿರುವುದರಿಂದ ಅರ್ಧ ಹೊಂದಾಣಿಕೆಯ ಕಸಿ ಮಾಡುವಿಕೆಯು ಸಾಧ್ಯವಾಗಿದೆ ಎಂದು ಹೇಳಿದರು.

ವಿಭಾಗದ ಮುಖ್ಯಸ್ಥ ಡಾ.ವಾಸುದೇವ ಭಟ್ ಮಾತನಾಡಿ, ಕರಾವಳಿ ಪ್ರದೇಶದಲ್ಲಿ ಯಶಸ್ವಿ ಹ್ಯಾಪ್ಲೊಐಡೆಂಟಿಕಲ್ ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟ್‌ಗೆ ಒಳಗಾದ ಮೊದಲ ರೋಗಿ ಎಂದು ಮಾಹಿತಿ ನೀಡಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಮಗುವಿನ ಜೀವ ಉಳಿಸಲು ಜಂಟಿಯಾಗಿ ಕೆಲಸ ಮಾಡಿದ ತಂಡವನ್ನು ಶ್ಲಾಘಿಸಿದ್ದಾರೆ.

ಉದಯವಾಣಿ
ಸುದಿನ
ಮಣಿಪಾಲ
2022
ಏಪ್ರಿಲ್ 25 | ಸೋಮವಾರ

▶ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ ಸಾಧನೆ

# ಮೊದಲ ಅರ್ಧ- ಹೊಂದಾಣಿಕೆಯ ಅಸ್ಥಿಮಜ್ಜೆಯ ಕಸಿ

**ಮಣಿಪಾಲ, ಎ. 24:** ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ ವತಿಯಿಂದ ಮೊದಲ ಅರ್ಧ- ಹೊಂದಾಣಿಕೆಯ ಅಸ್ಥಿಮಜ್ಜೆಯ ಕಸಿ ಯಶಸ್ವಿಯಾಗಿ ನಡೆಯಿತು.

ಅಕ್ಯೂಟ್ ಮೈಲೋಯ್ಡ್ ಲ್ಯುಕೇಮಿಯಾ (ಒಂದು ರೀತಿಯ ರಕ್ತದ ಕ್ಯಾನ್ಸರ್) ರೋಗ ಪತ್ತೆಯಾದ 12 ವರ್ಷದ ಬಾಲಕನಿಗೆ ಬೇರೆಡೆ ಕೀಮೋಥೆರಪಿಯನ್ನು ನೀಡಲಾಗಿತ್ತು. ಅಸ್ಥಿಮಜ್ಜೆಯ ಕಸಿ ಮಾಡಲು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ಕಳುಹಿಸಲಾಯಿತು. ಅಸ್ಥಿಮಜ್ಜೆಯ ಕಸಿ ಮಾಡುವುದೊಂದೇ ಬಾಲಕನಿಗೆ ಕ್ಯಾನ್ಸರ್‌ನಿಂದ ಗುಣಮುಖವಾಗಬಲ್ಲ ಚಿಕಿತ್ಸೆಯಾಗಿತ್ತು.



**ಏನಿದು ಚಿಕಿತ್ಸೆ?**

ಇದು ವೈದ್ಯರು ಮತ್ತು ಶುಶ್ರೂಷಾ ಸಿಬಂದಿಯ ತಜ್ಞ ತಂಡದಿಂದ ಮಾಡಲ್ಪಡುವ ಒಂದು ಸಂಕೀರ್ಣ ವೈದ್ಯಕೀಯ ಚಿಕಿತ್ಸೆಯಾಗಿದೆ. ಇದು ಕ್ಯಾನ್ಸರ್ ಯುಕ್ತ ಅಸ್ಥಿ ಮಜ್ಜೆಯನ್ನುನಿರ್ಮೂಲನೆಮಾಡಿಬದಲಾಗಿ ಆರೋಗ್ಯಕರ ಅಸ್ಥಿ ಮಜ್ಜೆಯ ಕೋಶಗಳನ್ನು ವರ್ಗಾಹಿಸುವ ಪ್ರಕ್ರಿಯೆಯಾಗಿದೆ. ರೋಗಿಗೆ ಅಸ್ಥಿ ಮಜ್ಜೆಯನ್ನು ದಾನ ಮಾಡಲು ಪೂರ್ಣ ಎಚ್‌ಎಲ್‌ಎಹೊಂದಾಣಿಕೆಯದಾನಿಯನ್ನು ಹೆಚ್ಚಾಗಿ ಆಯ್ಕೆ ಮಾಡಲಾಗುತ್ತದೆ.

**ಶಾಶ್ವತ ಚಿಕಿತ್ಸೆ**

ಮಕ್ಕಳ ರಕ್ತಶಾಸ್ತ್ರ ಮತ್ತು ಕ್ಯಾನ್ಸರ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ| ಅರ್ಚನಾ ಎಂ. ವಿ. ಮಾತನಾಡಿ, ಅಸ್ಥಿ ಮಜ್ಜೆಯ ಕಸಿ ಮಾಡುವುದರಿಂದ ಈ ಹಿಂದೆ ಗುಣಪಡಿಸಲಾಗದ ಕಾಯಿಲೆಗಳಿಗೆ ಚಿಕಿತ್ಸೆ ದೊರಕಿದೆ. ಅನೇಕ ರೋಗಿಗಳ ಜೀವನವನ್ನು ಬದಲಾಯಿಸಿದೆ. ಅಸ್ಥಿ ಮಜ್ಜೆಯ ಕಸಿಯು ಕೆಂಪು ರಕ್ತ ಕಣಗಳ ಅಸ್ವಸ್ಥತೆಗಳು (ಥಲಸ್ಸೆಮಿಯಾ), ಅಸ್ತಿ ಮಜ್ಜೆಯ ವೈಫಲ್ಯ, ಇಮ್ಯುನೊ ಡಿಫಿಷಿಯನ್ಸಿ ಮತ್ತು ಕೆಲವು ವಿಧದ ಕ್ಯಾನ್ಸರ್ ರೋಗಗಳಿಗೆ ಶಾಶ್ವತ ಗುಣಪಡಿಸುವ ಚಿಕಿತ್ಸೆಯಾಗಿದೆ ಎಂದರು.

**ಸೂಕ್ತ ಚಿಕಿತ್ಸೆ**

ಈ ಮಗುವಿನಲ್ಲಿ ಕಂಡುಬಂದ ಸವಾಲು ಎಂದರೆ ಪೂರ್ಣ ಎಚ್ ಎಲ್‌ಎ ಹೊಂದಾಣಿಕೆಯ ದಾನಿ ಲಭ್ಯವಿರಲಿಲ್ಲ. ಇದಕ್ಕೆ ಪರ್ಯಾಯವಾಗಿ ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲಾಜಿ ವಿಭಾಗದ ವೈದ್ಯರ ತಂಡವು ಮಗುವನ್ನು ಉಳಿಸುವ ವಿಶಿಷ್ಟವಾದ ಅರ್ಧ ಎಚ್‌ಎಲ್‌ಎ ಹೊಂದಾಣಿಕೆಯ ಅಸ್ಥಿಮಜ್ಜೆಯ ಕಸಿ ಮಾಡಲು ನಿರ್ಧರಿಸಿತು. ರೋಗಿಯ ಸಹೋದರಿ (9ವರ್ಷ ), ಕೇವಲ 50 ಶೇ. ಎಚ್‌ಎಲ್‌ಎ ಹೊಂದಿಕೆಯಾಗಿದ್ದಳು. ಅವಶ್ಯ ವೈದ್ಯಕೀಯಪರೀಕ್ಷೆಗಳನ್ನುನಡೆಸಿದಅನಂತರ ದಾನಿ ಎಂದು ನಿರ್ಧರಿಸಲಾಯಿತು. ರೋಗಿಯನ್ನು 6 ವಾರಗಳ ಕಾಲ ವಿಶೇಷ ಅಸ್ಥಿ ಮಜ್ಜೆಯ ಕಸಿ ಮಾಡುವಿಕೆಯ ಘಟಕದಲ್ಲಿ ಕಸಿ ಮಾಡಲಾಯಿತು. ಅನಂತರ ಆರೋಗ್ಯ ಸ್ಥಿರ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಕಸಿ ಮಾಡಿ 7 ತಿಂಗಳುಗಳಾಗಿದ್ದು ಈಗ ರೋಗಿಯು ಕ್ಯಾನ್ಸರ್‌ನಿಂದ ಮುಕ್ತರಾಗಿ ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ಮುಂದುವರೆಸುತ್ತಿದ್ದಾರೆ.

**ನವೀನ ತಂತ್ರಜ್ಞಾನ**

2 ದಶಕಗಳಲ್ಲಿ ಅಸ್ತಿ ಮಜ್ಜೆಯ ಕಸಿ ವಿಧಾನ ಬಹಳದೂರಸಾಗಿದೆ. ನವೀನತಂತ್ರಜ್ಞಾನಗಳು ಮತ್ತು ಸುಧಾರಿತ ಇಮ್ಯುನೊಸಪ್ರೆಸಿವ್ ಔಷಧಗಳು ಲಭ್ಯವಿರುವುದರಿಂದ ಅರ್ಧ-ಹೊಂದಾಣಿಕೆಯ ಕಸಿ ಮಾಡುವಿಕೆ ಸಾಧ್ಯವಾಗಿದೆ ಎಂದು ವಿಭಾಗದ ಮಕ್ಕಳ ಅಸ್ಥಿಮಜ್ಜೆ ಕಸಿ ತಜ್ಞ ಡಾ| ವಿನಯ್ ಎಂ.ವಿ.ಹೇಳಿದರು. ಇದು ನಮ್ಮ ಕರಾವಳಿ ಪ್ರದೇಶದಲ್ಲಿ ಯಶಸ್ವಿ ಹ್ಯಾಪ್ಲೋಐಡೆಂಟಿಕಲ್ ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟ್‌ಗೆ ಒಳಗಾದ ಮೊದಲ ರೋಗಿ ಎಂದು ವಿಭಾಗದ ಮುಖ್ಯಸ್ಥ ಡಾ| ವಾಸುದೇವ ಭಟ್ ಕೆ.ಮಾಹಿತಿ ನೀಡಿದರು.

ರಕ್ತ ಕೇಂದ್ರ ಮತ್ತು ಶುಶ್ರೂಷಕರ ತಂಡದವರು ರಕ್ತದ ಕ್ಯಾನ್ಸರ್ ಹೊಂದಿರುವ ಮಗುವಿನ ಜೀವ ಉಳಿಸಲು ಮಾಡಿರುವ ಜಂಟಿ ಕೆಲಸವನ್ನು ಕಸ್ತೂರ್ಬಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ| ಅವಿನಾಶ್ ಶೆಟ್ಟಿ ಶ್ಲಾಘಿಸಿದ್ದಾರೆ.

<u>**Other Links**</u>:

- **The Canara Post:** https://bit.ly/36IYzCA
- **Udupi Express:** https://udupixpress.com/first-half-compatible-bone-marrow-transplant-at-kasturba-hospital-manipal/
- **Karavali Express:** https://karavalixpress.com/news/kmc-26/
- **Udupi9:** https://udupi9.com/?p=5417
- **SuddiKirana:** https://suddikirana.com/sangati/ಹೊಂದಾಣಿಕೆ-ಅಸ್ಥಿಮಜ್ಜೆ-ಕಸಿ/
- **Namma Udupi Bulletin:** https://nammaudupibulletin.com/suddigalu/pradeshika/first-half-matched-bone-marrow-transplantation-at-kmc/